

ತಮ್ಮ ಮನೆಮಗನ ಹಾಗೆ ಬರಮಾಡಿಕೊಂಡರು. ‘ಆನಂದ್’ ನಂತರ ‘ರಥಸಪ್ತಮಿ’, ‘ಮನ ಮೆಚ್ಚಿದ ಹುಡುಗಿ’ ಹೀಗೆ ಸತತ ಮೂರು ಸಿನಿಮಾಗಳನ್ನು ಗೆಲ್ಲಿಸಿ ‘ಹ್ಯಾಟ್ರಿಕ್ ಹೀರೊ’ ಎಂಬ ಬಿರುದನ್ನೂ ನೆತ್ತಿಗಿಟ್ಟು ಆಶೀರ್ವದಿಸಿದರು.

ಮೊದಲ ಮೂರು ಸಿನಿಮಾಗಳಲ್ಲಿ ಕೌಟುಂಬಿಕ ಕಥನಗಳ ಮೂಲಕವೇ ಕನ್ನಡಕುಟುಂಬದಲ್ಲಿ ಅಕ್ಕರೆಯ ಮಗನ ಸ್ಥಾನ ಗಿಟ್ಟಿಸಿದ ಅವರು, ‘ಓಂ’ನಂಥ ರೌಡಿಸಂ ಕಥೆಯನ್ನೂ ಒಪ್ಪಿಕೊಂಡರು. ಕನ್ನಡ ಚಿತ್ರರಂಗಕ್ಕೆ ಮಚ್ಚು ಹಿಡಿಯಲು ಕಲಿಸಿದವರು ಶಿವಣ್ಣ ಎಂಬ ಮಾತು ಕ್ಲೀಷೆಯಾಗುವಷ್ಟು ಬಳಕೆಯಾಗಿದೆ. ಹಾಗೆ ಕೈಗೆ ಮೆತ್ತಿಕೊಂಡ ನೆತ್ತರನ್ನು ತೊಳೆದುಕೊಂಡು, ‘ಮಣಿ ಮಣಿ ಮಣಿ ಮಣಿ ಮಣಿಗೊಂದು ದಾರ’ ಎನ್ನುತ್ತ ಎತ್ತಿನ ಗಾಡಿಯ ಮೇಲೆ ಕೂತು ಅವರು ಕೊಟ್ಟ ‘ಜನುಮದ ಜೋಡಿ’ ಮತ್ತೊಂದು ದಾಖಲೆಯನ್ನೇ ಬರೆಯಿತು. ಇಂದಿಗೂ ಕನ್ನಡ ಚಿತ್ರರಂಗದ ಪಥದಲ್ಲಿ ಆ ಸಿನಿಮಾಗೆ ವಿಶಿಷ್ಟ ಸ್ಥಾನವಿದೆ. ‘ಎಕೆ 47’ ಮೂಲಕ ಗನ್ ಹಿಡಿದು ಅಬ್ಬರಿಸಿದ ಶಿವಣ್ಣನೇ ‘ಭೂಮಿತಾಯಿಯ ಚೊಚ್ಚಲಮಗ’, ‘ಚಿಗುರಿದ ಕನಸು’ ರೀತಿಯ ಸಿನಿಮಾಗಳನ್ನೂ ಮಾಡಿದರು. ‘ಜೋಗಿ’ ಕನ್ನಡ ಚಿತ್ರರಂಗದಲ್ಲಿ ಉಂಟುಮಾಡಿದ ಉಬ್ಬರ ಯಾರಿಗೆ ಗೊತ್ತಿಲ್ಲ? ಆ ಸಿನಿಮಾದಲ್ಲಿ ಅವರು ಮಚ್ಚು ಹಿಡಿದ ಶೈಲಿಯಷ್ಟೇ, ‘ಕಿಲ್ಲಿಂಗ್ ವೀರಪ್ಪನ್’ ಸಿನಿಮಾದಲ್ಲಿ ಟೀ ಗ್ಲಾಸ್ ಹಿಡಿದಿದ್ದೂ ಟ್ರೆಂಡ್ ಆಯಿತಲ್ಲ... ‘ಶ್ರೀಕಂಠ’ದಂಥ ವಿಶಿಷ್ಟ ಸಿನಿಮಾಗಳನ್ನು ಶಿವಣ್ಣನಲ್ಲದೇ ಬೇರೆ ನಟ ಮಾಡುವುದನ್ನು ಊಹಿಸಿಕೊಳ್ಳುವುದೂ ಕಷ್ಟ.

ಅವರ ಸಿನಿಮಾ ಜರ್ನಿಯಲ್ಲಿ ಸಾಕಷ್ಟು ಸೋಲಿನ ಗುರುತುಗಳಿವೆ; ಗೆಲುವಿನ ಪತಾಕೆಗಳೂ ಇವೆ. ಆದರೆ ಅವ್ಯಾವವೂ ಶಿವಣ್ಣನನ್ನು ಬದಲಾಯಿಸಿಲ್ಲ ಎಂಬುದು ಅವರ ವ್ಯಕ್ತಿತ್ವದ ಗಟ್ಟಿತನವನ್ನು ತೋರಿಸುತ್ತದೆ. ಈಗಲೂ ಅವರು ತಮ್ಮ ಜೊತೆ ಫೋಟೊ ತೆಗೆಸಿಕೊಳ್ಳಲು ಬಂದ ಹುಡುಗರನ್ನು ಗದರುತ್ತಲೇ ಹೆಗಲ ಮೇಲೆ ಕೈ ಹಾಕಿ ಫೋಟೊ ತೆಗೆಸಿಕೊಳ್ಳಬಹುದು. ಹತ್ತಾರು ಕ್ಯಾಮೆರಾಗಳನ್ನು ತಮ್ಮನ್ನು ಸೆರೆಹಿಡಿಯುತ್ತಿವೆ ಎಂದು ಗೊತ್ತಿದ್ದೂ ವೇದಿಕೆಯ ಮೇಲಿಂದಲೇ ಬಗೆಬಗೆಯ ಹಾವಭಾವ ಮಾಡಿ, ತನಗೇನೂ ಗೊತ್ತಿಲ್ಲ ಎಂಬಂತೆ ತಣ್ಣಗೆ ಕೂಡಬಲ್ಲರು. ಮನಸ್ಸಿಗೆ ಅನಿಸಿದ್ದನ್ನು ನೇರವಾಗಿ ಹೇಳಿಬಿಡಬಲ್ಲರು. ಮನಸ್ಸು ಆರ್ದ್ರಗೊಂಡಾಗ ಚಿಕ್ಕ ಹುಡುಗರ ಹಾಗೆ ಬಿಕ್ಕಿ ಬಿಕ್ಕಿ ಅಳಬಲ್ಲರು. ತಮ್ಮ ಮೊಮ್ಮಕ್ಕಳ ವಯಸ್ಸಿನವರ ಜೊತೆಗೂ ಅವರಷ್ಟೇ ಚುರುಕಾಗಿ ನರ್ತಿಸುತ್ತ ಮೈಮರೆಯಬಲ್ಲರು. ತಮ್ಮ ವಯಸ್ಸಿನ ಅರಿವು ತಾವೇ ಮರೆಯುವ ಹಟತೊಟ್ಟವರಂತೆ ಉತ್ಸಾಹವನ್ನು ಆವಾಹಿಸಿಕೊಂಡು ಕೆಲಸಮಾಡಬಲ್ಲರು. ಇವೆಲ್ಲವೂ ಸೇರಿಯೇ ‘ಶಿವಣ್ಣ’ ರೂಪುಗೊಂಡಿದ್ದು.

ಇತ್ತೀಚೆಗೆ ಶಿವಣ್ಣನ 60ನೇ ವರ್ಷದ ಹುಟ್ಟುಹಬ್ಬದ ದಿನ ಸಾಲು ಸಾಲು ಸಿನಿಮಾಗಳ ಪೋಸ್ಟರ್‌ಗಳು ಬಿಡುಗಡೆಗೊಂಡವು. ಅವರು ರಜನೀಕಾಂತ್ ಸಿನಿಮಾದಲ್ಲಿ ನಟಿಸುತ್ತಿರುವ ಸುದ್ದಿಯೂ ಹೊರಬಿದ್ದಿದೆ. ಊರಿಗೆ ಊರೇ ಶಿವಣ್ಣನ ಜನ್ಮದಿನವನ್ನು ಸಂಭ್ರಮಿಸುತ್ತಿರುವಾಗ ‘ಈ ವರ್ಷ ಇವೆಲ್ಲ ಬೇಡ’ ಎಂದು ಶಿವಣ್ಣ ತಣ್ಣಗಿದ್ದಾರೆ. ಅವರ ಮನಸಲ್ಲಿ ಅಪ್ಪುವಿನ ನೆನಪಿನ ಮೆರವಣಿಗೆ ಓಡುತ್ತಿರಬಹುದು. ಅವರು ಜನ್ಮದಿನದಂದು ಬಂದು ಹಗುರವಾಗಿ ಅಪ್ಪಿಕೊಳ್ಳುತ್ತಿದ್ದ ಬಿಸುಪು ಕಾಡುತ್ತಿರಬಹುದು.

ಇಲ್ಲ, ದುಃಖ ಶಿವಣ್ಣನಿಗೆ ಶೋಭಿಸುವುದಿಲ್ಲ. ವಯಸ್ಸಿನ ಲೆಕ್ಕಾಚಾರವನ್ನು ‘ಉದ್ರಿ ಪಟ್ಟಿಯಲ್ಲಿ ಬರೆದುಕೋ’ ಎಂದು ದೇವರಿಗೇ ಹೇಳಿ, ಕ್ಯಾಮೆರಾ ಎದುರಿಗೆ ತರುಣೋತ್ಸಾಹದಿಂದ ನಟಿಸುವುದರಲ್ಲಿಯೇ ಶಿವಣ್ಣತನ ಇದೆ. ಆ ಉತ್ಸಾಹ ಇನ್ನಷ್ಟು ಹೆಚ್ಚಾಗಲಿ. ಅವರು ಇನ್ನೂ ಬಹುಕಾಲ ಚಿತ್ರರಂಗದಲ್ಲಿ ಎಲ್ಲರ ಅಕ್ಕರೆಯ ‘ಅಣ್ಣ’ನಾಗಿರಲಿ.

ಹ್ಯಾಪಿ ಬರ್ತ್‌ಡೇ ಶಿವಣ್ಣ!

ಪ್ರತಿಕ್ರಿಯಿಸಿ: feedback@sudha.co.in



# ಜಮಾಲಿಗುಡ್ಡದ ಅನಾವರಣ

‘ಜಮಾಲಿಗುಡ್ಡ’ ಸಿನಿಮಾ ಸೆಟ್ಟೇರಿದಂದಿನಿಂದಲೂ ಸುದ್ದಿ ಮಾಡುತ್ತಲೇ ಇದೆ. ಧನಂಜಯ್ ವಿಭಿನ್ನ ಲುಕ್, ಆ ಕಥೆಯ ಕುರಿತಾಗಿ ಕುತೂಹಲ ಹುಟ್ಟಿಸುವ ಸುದ್ದಿಗಳಿಂದ ಗಮನಸೆಳೆಯುತ್ತಿದೆ. ಅಧಿತಿ ಪ್ರಭುದೇವ ಮತ್ತು ಧನಂಜಯ್ ಜೊತೆಯಾಗಿ ನಟಿಸಿರುವ ಈ ಚಿತ್ರದ ಬಿಡುಗಡೆಯ ದಿನವೂ ಈಗ ನಿಶ್ಚಿತಗೊಂಡಿದೆ.

ಕುಶಾಲ್ ಗೌಡ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರ ಒಂದು ಕಾಲ್ಪನಿಕ ಊರಿನಲ್ಲಿ ನಡೆಯುವ ಕಥೆಯನ್ನು ಒಳಗೊಂಡಿದೆಯಂತೆ. ಚಿತ್ರದ ನಾಯಕನ ಪಾತ್ರ ‘ಹಿರೋಶಿಮಾ’ ಎಂದು. ಖಳನೋ ಸ್ನೇಹಿತನೋ ಗೊತ್ತಿಲ್ಲ, ಈ ಚಿತ್ರದಲ್ಲಿ ನಟಿಸಿರುವ ಯಶ್ ಶೆಟ್ಟಿ ಪಾತ್ರದ ಹೆಸರು ‘ನಾಗಾಸಾಕಿ’. ಅಧಿತಿ ಪ್ರಭುದೇವ ‘ರುಕ್ಮಿಣಿ’ ಎನ್ನುವ ಹೆಸರಿನ ಹುಡುಗಿಯಾಗಿ ನಟಿಸಿದ್ದಾರೆ.

ಹೆಸರುಗಳಷ್ಟೇ ಅಲ್ಲ, ಕಥೆಯೂ ಭಿನ್ನವಾಗಿದೆ. ಹಾಗಾಗಿ ಪ್ರೇಕ್ಷಕ ಇದಕ್ಕೆ ಭೇಷ್ ಅನ್ನುತ್ತಾನೆ ಎನ್ನುವ ವಿಶ್ವಾಸ ತಂಡಕ್ಕಿದೆ. ಇತ್ತೀಚೆಗಷ್ಟೇ ಚಿತ್ರದ ಬಿಡುಗಡೆಯ ದಿನಾಂಕವನ್ನೂ ತಂಡ ಜಾಹೀರುಗೊಳಿಸಿದೆ. ಸೆ. 9ಕ್ಕೆ ‘ಜಮಾಲಿಗುಡ್ಡ’ವನ್ನು ತೆರೆಗೆ ತರುವ ಆಲೋಚನೆ ತಂಡದ್ದು. ಪ್ರಕಾಶ್ ಬೆಳವಾಡಿ, ಭಾವನಾ ರಾವ್, ತ್ರಿವೇಣಿ ರಾವ್ ಅವರೂ ತಾರಾಗಣದಲ್ಲಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಕಾರ್ತಿಕ್ ಎಸ್. ಛಾಯಾಗ್ರಹಣ, ಹರೀಶ್ ಕೊಮ್ಮ ಸಂಕಲನ ಈ ಚಿತ್ರಕ್ಕಿದೆ.

